# ವ್ಯವಸ್ಥೆಯೇ ಅವ್ಯವಸ್ಥೆಯಾಗಿ ಅಸಹಾಯಕತೆಗೆ ದೂಡಿದಾಗ...

'ಆರೋಗ್ಯವೇ ಮಹಾಭಾಗ್ಯ' ಎಂಬ ಮಾತೊಂದಿದೆ. ಈ ಮಾತು ಎಷ್ಟೊಂದು ಅರ್ಥಗರ್ಭಿತ ಮತ್ತು ಕಣ್ಣಿಗೆ ಕಾಣದ ಒಂದು ಸೂಕ್ಷ್ಮಾಣು ನಮ್ಮ ದೇಹಸ್ವಾಸ್ಥ್ಯದ ಲಯ ಕದಡಿದರೆ ಏನೆಲ್ಲಾ ಪಡಿಪಾಟಲು ಅನುಭವಿಸಬೇಕಾಗುತ್ತದೆ ಎಂಬ ಕಹಿಸತ್ಯವನ್ನು ಕೊರೊನಾ ಮಹಾಮಾರಿಯ ಎರಡನೆಯ ಅಲೆ ನಮ್ಮಲ್ಲಿ ಅನೇಕರಿಗೆ ಮನವರಿಕೆ ಮಾಡಿಕೊಟ್ಟಿದೆ. ಈ ಸಾಂಕ್ರಾಮಿಕ ತಂದೊಡ್ಡಿದ ಸಂಕಷ್ಟದ ಸಂದರ್ಭವು ಆರೋಗ್ಯ ಕಾಪಾಡಿಕೊಳ್ಳುವುದನ್ನೇ ಜನಸಮುದಾಯದ ಎದುರು ಬೃಹತ್ ಸವಾಲಾಗಿ ನೆಲೆಗೊಳಿಸಿರುವುದು ಸುಳ್ಳಲ್ಲ. ಈ ಸವಾಲಿಗೆ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರೂ ಮುಖಾಮುಖಿಯಾಗಿದ್ದಾರೆ.

ಆರೋಗ್ಯದಲ್ಲಿ ಸಾಮಾನ್ಯ ಸಂದರ್ಭದಲ್ಲಿ ಏರುಪೇರಾದಾಗ ಅದನ್ನು ನಿಭಾಯಿಸಲು ಈ ಪರಿ ಎಡರುತೊಡರುಗಳನ್ನು ಮೆಟ್ಟಬೇಕಾಗಿಲ್ಲ. ವ್ಯಕ್ತಿ ಮತ್ತು ಕೌಟುಂಬಿಕ ನೆಲೆಯ ತೊಂದರೆಗಳು ಅವರವರ ಇತಿಮಿತಿಗೊಳಪಟ್ಟು ಆಗಲೂ ಎದುರಾಗಬಹುದು. ಆದರೆ, ನಮ್ಮ ಆರೋಗ್ಯ ವ್ಯವಸ್ಥೆಯೇ ಅವ್ಯವಸ್ಥೆಯಾಗಿ ಪರಿವರ್ತನೆಗೊಂಡು ನಿಮ್ಮನ್ನು ಕಾಡುವ ಮಟ್ಟಿಗೆ, ಪೀಡಿಸುವ ಮಟ್ಟಿಗೆ ಪರಿಸ್ಥಿತಿ ವಿಷಮಿಸಿರುವುದಿಲ್ಲ. ಈಗ ಉದ್ಭವಿಸಿರುವಂತಹ ಅತ್ಯಂತ ಅಸಾಮಾನ್ಯ ಸ್ಥಿತಿಯಲ್ಲಿ ಆರೋಗ್ಯ ಕೈಕೊಟ್ಟರೆ ವ್ಯಕ್ತಿ ಮತ್ತು ಕುಟುಂಬ ಅನುಭವಿಸುವ ಯಮಯಾತನೆ ಮತ್ತು ಅಸಹಾಯಕತೆ ಎಂತಹುದು ಎಂಬುದು ಪದಗಳಿಗೆ ನಿಲುಕುವಂತಹುದಲ್ಲ.

ಈ ಎರಡನೇ ಅಲೆಯು ಲಕ್ಷಾಂತರ ಕುಟುಂಬಗಳಿಗೆ 'ನರಕ'ದರ್ಶನ ಮಾಡಿಸಿದೆ. ಸೋಂಕಿನ ಪರೀಕ್ಷೆ, ಅದರ ವರದಿ ಕೈಸೇರುವಲ್ಲಿನ ವಿಳಂಬ, ಅದರ ಸತ್ಯಾಸತ್ಯತೆಯ ಬಗೆಗೆ ಗೊಂದಲ, ಪುನಃ ಪರೀಕ್ಷೆಗೆ ಒಳಗಾಗಬೇಕಾದ ಸಂಕಟ, ಆಂಬುಲೆನ್ಸ್, ಆಸ್ಪತ್ರೆ, ಹಾಸಿಗೆ, ಔಷಧ, ಆಮ್ಲಜನಕ, ಐಸಿಯು... ಈ ಎಲ್ಲವೂ ವ್ಯಕ್ತಿಯ ಎಲ್ಲ ಬಗೆಯ ಸಾಮರ್ಥ್ಯಗಳನ್ನು ಅಗ್ನಿಪರೀಕ್ಷೆಗೆ ಒಡ್ಡುವಂತಾದರೆ ಅವರ ಮಾನಸಿಕ ಸ್ಥಿತಿಯಲ್ಲಿ ಯಾವ ಪರಿ ಅಲ್ಲೋಲಕಲ್ಲೋಲ ಆಗಬಹುದು!? ಹಾಸಿಗೆ ಇಲ್ಲ, ಔಷಧ ಇಲ್ಲ, ಆಮ್ಲಜನಕ ಇಲ್ಲ ಎನ್ನುವುದು ಬಾಧಿತ ಕುಟುಂಬದ ಆತ್ಮಬಲಕ್ಕೆ ದೊಡ್ಡ ಪೆಟ್ಟು ಕೊಟ್ಟರೆ, ಖರ್ಚುಗಳು ಅವರ ಕೌಟುಂಬಿಕ ಆರ್ಥಿಕತೆಯನ್ನೇ ನುಚ್ಚುನೂರಾಗಿಸಿವೆ. ಆರೋಗ್ಯ ಬಿಗಡಾಯಿಸಿ ಆಸ್ಪತ್ರೆಗೆ ಹೋದಾಗ ಯಾವ ಚೌಕಾಶಿಗೂ ಎಡೆಯಿಲ್ಲ. ಒಳಗೆ ಕಾಲಿಡುತ್ತಲೇ ಷರತ್ತು. ಲಕ್ಷಗಳಲ್ಲೇ ಮಾತು. ಕಟ್ಟಿದರೆ ಉಂಟು ಒಳಗೆ ಪ್ರವೇಶ, ಇಲ್ಲದಿದ್ದರೆ ಇಲ್ಲ! ವಿಮೆ ಇದ್ದರೂ ಹೆಚ್ಚಿನ ಆಸ್ಪತ್ರೆಗಳಲ್ಲಿ ಅದಕ್ಕೆ ಕವಡೆಕಾಸಿನ ಕಿಮ್ಮತ್ತು ಇಲ್ಲ.

ಆಸ್ಪತ್ರೆ, ವಾಹನ, ವೈದ್ಯರ ವಿಷಯದಲ್ಲಿ ಆಯ್ಕೆಯ ಪ್ರಶ್ನೆಯೇ ಇಲ್ಲ. ಯಾವುದಾದರೂ ಒಂದು ಆಸ್ಪತ್ರೆ ಸಿಕ್ಕರೆ ಅದೇ ಭಾಗ್ಯ. ಸಿಕ್ಕ ವಾಹನ ಹಿಡಿದು ದೌಡಾಯಿಸಬೇಕು, ಕೈಗೆ ಸಿಕ್ಕ ವೈದ್ಯರನ್ನು ಕಾಣಬೇಕು, ಅವರು ಹೇಳಿದ್ದನ್ನೆಲ್ಲ ಮಾಡಬೇಕು. ಪ್ರಶ್ನಿಸುವ, ಹೆಚ್ಚು ವಿವರಗಳನ್ನು ಕೇಳಿ ತಿಳಿಯುವ ಅಥವಾ ಮತ್ತೊಬ್ಬ ವೈದ್ಯರ ಬಳಿಗೆ ಹೋಗುವ ಅವಕಾಶಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಆಮ್ಲಜನಕ ಪೂರೈಕೆಯ ಬೆಂಬಲವುಳ್ಳ ಹಾಸಿಗೆ, ಐಸಿಯು ಅಗತ್ಯವಿದ್ದವರಿಗೆ ಅವೇನಾದರೂ ಸಿಕ್ಕರೆ 'ಸ್ವರ್ಗ'ದಲ್ಲಿ ಸ್ಥಾನ ಸಿಕ್ಕಷ್ಟು ಸಂಭ್ರಮ. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಯಾವ ಪರೀಕ್ಷೆ ಹೇಳಿದರೆ ಅದು, ಯಾವ ಔಷಧ ಹೇಳಿದರೆ ಅದು ಎಂದು ಓಡಾಡುವ ಮತ್ತು ಖರ್ಚುವೆಚ್ಚಗಳ ಬಗೆಗೆ ತಲೆಕೆಡಿಸಿಕೊಳ್ಳದಂತಹ ದಯನೀಯ ಸ್ಥಿತಿ. ಉಸಿರು ಉಳಿದರೆ ಸಾಕು ಎಂಬ ಧಾವಂತ.

ಈ ಧಾವಂತವನ್ನು ದೋಚುವುದಕ್ಕೆ ಬಳಸಿಕೊಳ್ಳುವ ಧನದಾಹಿ ಜಿಗಣೆಗಳ ಕಾಟ ಮತ್ತೊಂದೆಡೆ. ಹಾಸಿಗೆ ಬ್ಲಾಕ್ ಮಾಡುವುದರಿಂದ ಹಿಡಿದು ಕಾಳಸಂತೆಯಲ್ಲಿ ಔಷಧ ಮಾರುವವರೆಗೂ ಈ ದಂಧೆ ವ್ಯಾಪಿಸಿ ಜನರ ಜೀವ ಹಿಂಡಿತು. 'ಆಮ್ಲಜನಕ ಖಾಲಿಯಾಗಿದೆ. ನೀವೇ ತಂದುಕೊಟ್ಟರೆ ಆದೀತು, ಇಲ್ಲದಿದ್ದರೆ ಬೇರೆಡೆಗೆ ಕರೆದೊಯ್ಯಿರಿ...' ಎಂದು ದಯೆ–ಕರುಣೆ ಇಲ್ಲದಂತಹ, ಸಮಯ–ಸಂದರ್ಭದ ವಿವೇಚನೆಯನ್ನೇ ಮರೆತಂತಹ ಕರ್ಣಕಠೋರ ಮಾತು!

ಸೋಂಕಿನ ಮೆದುಲಕ್ಷಣಗಳನ್ನು ಹೊಂದಿ, ಮನೆಯಲ್ಲೇ ಪ್ರತ್ಯೇಕವಾಗಿ ಉಳಿದುಕೊಂಡು ವೈದ್ಯರ ಸಲಹೆ–ಸೂಚನೆ ಪಾಲಿಸುವ ಮೂಲಕ ಸೋಂಕಿನಿಂದ ಹೊರಬರಲು ಬಯಸುವವರ ಕಷ್ಟ ಮತ್ತೊಂದು ಬಗೆಯದು. ಪ್ರತ್ಯೇಕವಾಸಕ್ಕೆ ಬೇಕಾದ ಅನುಕೂಲಗಳು ಇಲ್ಲದೇ ಇರುವುದು ಒಂದು ಸಮಸ್ಯೆ. ಸಲಹೆ–ಸೂಚನೆಗೆ ವೈದ್ಯರ ಸೇವೆ ಪಡೆಯುವುದು ಮತ್ತೊಂದು ಬಗೆಯ ಕಷ್ಟ. ವೈದ್ಯರೊಂದಿಗೆ ನಿಕಟ ಮತ್ತು ನಿರಂತರ ಸಂಪರ್ಕ ಹೊಂದಿರುವ ಕುಟುಂಬಗಳ ಸಂಖ್ಯೆ ನಮ್ಮಲ್ಲಿ ಕಡಿಮೆ. ಅಂತಹವರ ಪಡಿಪಾಟಲು ಅನುಭವಿಸಿದವರಿಗಷ್ಟೇ ಗೊತ್ತಾಗುವಂತಹುದು. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಸದೃಢವಾಗಿ ಇರದಿದ್ದರೆ ಏನೆಲ್ಲ ಕಷ್ಟಕೋಟಲೆ ಅನುಭವಿಸಬೇಕು ಎಂಬುದನ್ನು ಕೊರೊನಾ ಎರಡನೇ ಅಲೆ ನಮ್ಮೆದುರು ತೆರೆದಿಟ್ಟಿದೆ. ಇದರ ನಡುವೆಯೇ ಮೂರನೇ ಅಲೆಯ ಬಗೆಗೆ ಎಚ್ಚರಿಕೆಯ ಮಾತುಗಳು ತಜ್ಞರಿಂದ ಹೊರಬರುತ್ತಿವೆ. ವ್ಯಕ್ತಿ, ವ್ಯವಸ್ಥೆ ಮತ್ತು ಸಮುದಾಯದ ಆದ್ಯತೆಗಳು ಮರುವಿನ್ಯಾಸಗೊಳ್ಳಬೇಕಾದ ತುರ್ತು ಎದುರಾಗಿದೆ.

■ ಎನ್. ಉದಯಕುಮಾರ್

ಕೊರೊನಾ ಎರಡನೇ ಅಲೆಯು ಲಕ್ಷಾಂತರ ಕುಟುಂಬಗಳಿಗೆ 'ನರಕ'ದರ್ಶನ ಮಾಡಿಸಿದೆ. ಸೋಂಕಿನ ಪರೀಕ್ಷೆ, ಅದರ ವರದಿ ಕೈಸೇರುವಲ್ಲಿನ ವಿಳಂಬ, ಅದರ ಸತ್ಯಾಸತ್ಯತೆಯ ಬಗೆಗೆ ಗೊಂದಲ, ಪುನಃ ಪರೀಕ್ಷೆಗೆ ಒಳಗಾಗಬೇಕಾದ ಸಂಕಟ, ಆಂಬುಲೆನ್ಸ್, ಆಸ್ಪತ್ರೆ, ಹಾಸಿಗೆ, ಔಷಧ, ಆಮ್ಲಜನಕ, ಐಸಿಯು... ಈ ಎಲ್ಲವೂ ವ್ಯಕ್ತಿಯ ಎಲ್ಲ ಬಗೆಯ ಸಾಮರ್ಥ್ಯಗಳನ್ನು ಅಗ್ನಿಪರೀಕ್ಷೆಗೆ ಒಡ್ಡಿದೆ.



ಈಶ್ವರ್